# ಮುರುಘಾಮಠಕ್ಕೆ ವಿಜಯ ಸಂಕೇಶ್ವರ ಭೇಟಿ

**ಚಿತ್ರದುರ್ಗ ಮಾ. 23** - ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠಕ್ಕೆ ಇಂದು ಖ್ಯಾತ ಉದ್ಯಮಿ, ಹಿರಿಯ ರಾಜಕೀಯ ಧುರೀಣ ಹಾಗು ವಿಆರ್‌ಎಲ್ ಸಮೂಹ ಸಂಸ್ಥೆಗಳ ಅಧ್ಯಕ್ಷ ವಿಜಯ ಸಂಕೇಶ್ವರ ದಂಪತಿಗಳು ಭೇಟಿ ನೀಡಿ ಡಾ. ಶಿವಮೂರ್ತಿ ಮುರುಘಾ ಶರಣರಿಂದ ಆಶೀರ್ವಾದ ಪಡೆದುಕೊಂಡರು. ನಂತರ ಬಸವೇಶ್ವರ ಪುತ್ಥಳಿ ನಿರ್ಮಾಣ ಕಾಮಗಾರಿ, ಮುರುಘಾಶ್ರೀ ಮ್ಯೂಸಿಯಂ ಹಾಗು ಶ್ರೀಮಠಕ್ಕೆ ಹೊಂದಿಕೊಂಡು ಇರುವ ಮುರುಘಾವನಕ್ಕೆ ಭೇಟಿ ನೀಡಿ ಪ್ರಕೃತಿ ಮಡಿಲಿನ ದೃಶ್ಯ ವೈಭವವನ್ನು ಕಣ್ತುಂಬಿಕೊಂಡರು.







